**ದಿಃ 2-11-2022 ರಂದು ಸಲ್ಲಿಸಿದ ಅರ್ಜಿ ಮೇಲೆ ಆದೇಶ**

ಅರ್ಜಿದಾರ/ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಪ್ರಸ್ತುತ ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ. 173(8) ರಡಿಯಲ್ಲಿ ಸಲ್ಲಿಸಿದ್ದಿರುತ್ತದೆ.

**2.** ಆರೋಪಿ ಹಾಗೂ ಫಿರ್ಯಾದಿದಾರನ ಜಂಟಿ ಖಾತೆಯಲ್ಲಿರುವ ಅಂಕೋಲಾ ವ್ಯಾಪ್ತಿಯ ಸ. ನಂ. 28/3 ವಿಸ್ತೀರ್ಣ 0–9–8 ಜಮೀನನ್ನು ಸದರಿ ಪ್ರಕರಣದ ಫಿರ್ಯಾದಿ ಗಮನಕ್ಕೆ ತರದೇ ದ್ವಾರಕಾ ಕ್ರೆಡಿಟ್ ಸಹಕಾರಿ ನಿಯಮಿತ, ಅಂಕೋಲಾ ರವರಲ್ಲಿ 4 ನೇ ಸಾಕ್ಷಿದಾರರು ಮಾಡಿದ ಸಾಲಕ್ಕೆ ಆರೋಪಿ ಭದ್ರತೆಗಾಗಿ ಅಡಮಾನ ಮಾಡುವಲ್ಲಿ ಆಗಿನ ದ್ವಾರಕಾ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ಅಂಕೋಲಾದ ಶಾಖಾ ವ್ಯವಸ್ಥಾಪಕರು ಹಾಗೂ ಉಪನೋಂದಣಾಧಿಕಾರಿ, ಕಾರವಾರ ರವರು ಸಹ ಕೈಜೋಡಿಸಿ ಮೋಸ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದರೂ ಸಹ ತನಿಖಾಧಿಕಾರಿ ಭಾರತ ದಂಡ ಸಂಹಿತೆ ಕಲಂ. 423 ರಡಿಯಲ್ಲಿ ದೋಷಾರೋಪಣಾ ಪತ್ರವನ್ನು 2 ನೇ ಆರೋಪಿ ಮೇಲೆ ಮಾತ್ರ ಸಲ್ಲಿಸಿದ್ದಿರುತ್ತದೆ.

**3.** ಕಾರಣ ಫಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ಸದರಿ ಹಣಕಾಸಿನ ಸಂಸ್ಥೆ ಮತ್ತು

ಉಪನೋಂದಣಾಧಿಕಾರಿ ಎಸಗಿದ ಕೃತ್ಯ ಕಾನೂನುಬಾಹಿರವಾಗಿರುತ್ತದೆ. ಆದ್ದರಿಂದ ಈ ಕುರಿತು ಅಂಕೋಲಾ ಪೊಲೀಸರು ಮುಂದುವರೆದು ತನಿಖೆ ಮಾಡಲು ಆದೇಶಿಸಬೇಕೆಂದು ಅರ್ಜಿಯಲ್ಲಿ ವಿನಂತಿಸಿರುತ್ತಾರೆ.

**4.** ಸದರಿ ಅರ್ಜಿಗೆ ಆರೋಪಿ ಪರ ತಕರಾರು ಸಲ್ಲಿಸಿ, ಪ್ರಕರಣದ ಆರೋಪಿ ಮೇಲೆ ಯಾವುದೇ ಗುರುತರವಾದ ಸಾಕಷ್ಟು ಸಾಕ್ಷ್ಯಾಧಾರವಿಲ್ಲದೇ ಇದ್ದರೂ ಸಹ ತನಿಖಾಧಿಕಾರಿ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ. ಫಿರ್ಯಾದಿದಾರನ ಗಮನಕ್ಕೆ ಇಲ್ಲದಂತೆ ಚಾಸಾ -4 ರವರ ಸಾಲಕ್ಕೆ ಆರೋಪಿ ಜಮೀನು ಸ. ನಂ. 28/3 ವಿಸ್ತೀರ್ಣ 0-9-8 ಆಸ್ತಿಯನ್ನು ಅಡಮಾನ ಮಾಡಿರುತ್ತಾನೆಂದು ತಿಳಿಸಿದ ಸಂಗತಿಯನ್ನು ಅಲ್ಲಗಳೆದಿರುತ್ತಾರೆ. ಸದರಿ ಹಣಕಾಸಿನ ಸಂಸ್ಥೆ ಹಾಗೂ ಉಪನೋಂದಣಾಧಿಕಾರಿ ವ, ಪ್ರಕರಣದ ಆರೋಪಿ ಯಾವುದೇ ಮೋಸವನ್ನು ಎಸಗುವ ಅಪರಾಧ ಮಾಡಿರುವುದಿಲ್ಲ.

**5.** ಅದು ಅಲ್ಲದೆ ಅಂಕೋಲಾ ಪೋಲೀಸರು ಪ್ರಕರಣದ ತನಿಖೆ ಸಮಯದಲ್ಲಿ ದ್ವಾರ್ವಕಾ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಸ್ಥೆಯಿಂದ ಹಾಗೂ ಕಾರವಾರ ಉಪನೋಂದಣಾಧಿಕಾರಿ ಕಡೆಯಿಂದ ಮತ್ತು ಇತರ ಇಲಾಖೆಗಳಿಂದ ದಾಖಲೆಗಳನ್ನು ತರಿಸಿಕೊಂಡ ನಂತರವೇ ಆಗಿನ ಸಹಕಾರಿ ಸಂಸ್ಥೆ, ಶಾಖಾ ವ್ಯವಸ್ಥಾಪಕರನ್ನು ಹಾಗೂ ಕಾರವಾರ ಸಬ್ ರಜಿಸ್ಟ್ರಾರ್‌ನ್ನು

ಪ್ರಕರಣದಿಂದ ಕೈಬಿಟ್ಟದ್ದಿರುತ್ತದೆ. ಸದರಿ ಅರ್ಜಿಗೆ ಪೂರಕವೆಂಬಂತೆ ಪ್ರಕರಣದ ಫಿರ್ಯಾದಿದಾರ ಯಾವುದೇ ಪೂರಕ ಸಾಕ್ಷ್ಯಾಧಾರ ಹಾಜರುಪಡಿಸಿರುವುದಿಲ್ಲ. ಕಾರಣ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

**6.** ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

**ಅಂಶಗಳು**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು ಅರ್ಜಿದಾರರು ಅರ್ಹರಿರುತ್ತಾರೆಯೇ?
2. ಯಾವ ಆದೇಶ ?

**7.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ನಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

**8.** **ಅಂಶ ನಂ.1**:- ಅಂಕೋಲಾ ವ್ಯಾಪ್ತಿಯ ಸ ನಂ. 28/3 ವಿಸ್ತೀರ್ಣ 0-9-8 ಜಮೀನು ಫಿರ್ಯಾದಿದಾರ ಹಾಗೂ ಆರೋಪಿತನ ಅವಿಭಜಿತ ಜಂಟಿ ಆಸ್ತಿ ಇರುತ್ತದೆ. ದ್ವಾರ್ಕಾ ಸೌಹಾರ್ದ ಕ್ರೆಡಿಟ್ ಸಹಕಾರಿ

ನಿಯಮಿತ, ಅಂಕೋಲಾ ರವರಲ್ಲಿ ಚಾಸಾ -4 ರವರು ಮಾಡಿದ ಸಾಲಕ್ಕೆ ಫಿರ್ಯಾದಿ ಗಮನಕ್ಕೆ ತರದಂತೆ ಭದ್ರತೆಗಾಗಿ ಆರೋಪಿ ಅಡಮಾನ ಮಾಡಿ ಅದನ್ನು ಕಾರವಾರ ಉಪ-ನೋಂದಣಾಧಿಕಾರಿ ಬಳಿ ಇಸಿ ಮಾಡಿಕೊಟ್ಟ ಅಪರಾಧ ಎಸಗಿರುವುದಾಗಿ ತನಿಖಾಧಿಕಾರಿ ಆರೋಪಿ ವಿರುದ್ಧ ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

**9.** ಪ್ರಕರಣದಲ್ಲಿ ಸಾಕ್ಷಿ ವಿಚಾರಣೆ ಪ್ರಾರಂಭವಾದ ನಂತರ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ. 173(2) ರಡಿಯಲ್ಲಿ ಪೋಲೀಸ ಅಧಿಕಾರಿ ತನಿಖೆ ಪೂರ್ಣಗೊಳಿಸಿ ಅಪರಾಧದ ಕುರಿತು ಕ್ರಮ ಕೈಗೊಳ್ಳಲು ನಿಗದಿಪಡಿಸಿದ ದಂಡಾಧಿಕಾರಿಗಳ ಮುಂದೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನಿಗದಿಪಡಿಸಿದ ಅವಧಿಯೊಳಗಾಗಿ ಸಲ್ಲಿಸಬೇಕೆಂದು ತಿಳಿಯಪಡಿಸುತ್ತದೆ. ಹಾಗೆ ಸಲ್ಲಿಸಿದ ಅಪರಾಧದ ಅಂತಿಮ ವರದಿ ನಂತರ ಪೊಲೀಸ್ ಠಾಣೆ ಆಡಳಿತವನ್ನು ಹೊಂದಿರುವ ಅಧಿಕಾರಿ ಮೌಖಿಕ ಅಥವಾ ಲಿಖಿತ ರೂಪದ ಮತ್ತಷ್ಟು ಸಾಕ್ಷಿಯನ್ನು ಪಡೆದಲ್ಲಿ ಅಂತಹ ಸಾಕ್ಷ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ವರದಿಯನ್ನು ನ್ಯಾಯಾಲಯಕ್ಕೆ ಕಳಿಸಲು ಅವಕಾಶವಿರುತ್ತದೆ. ಅಂತಹ ಸಮಯದಲ್ಲಿ ಕಲಂ. 173(2) ರಿಂದ 173(6) ರವರೆಗಿನ ಉಪಪ್ರಕರಣಗಳ ಮೇರೆಗೆ ದಾಖಲಿಸಲಾದ ವರದಿಯ ಸಂಬಂಧದಲ್ಲಿ ಅನ್ವಯಿಸುವ ಎಲ್ಲ ಕ್ರಮಗಳು ತದನಂತರ ಕಳಿಸಿದ ವರದಿಗೆ

ಅನ್ವಯವಾಗುತ್ತದೆಂದು ಸ್ಪಷ್ಟಪಡಿಸುತ್ತದೆ. ಸದರಿ ಸಂಗತಿಯನ್ನು ಅವಲೋಕಿಸಿದಾಗ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೊರೆಯುವ ಯಾವುದೇ ಮೌಖಿಕ ಅಥವಾ ಲಿಖಿತ ಸಾಕ್ಷ್ಯಾಧಾರವನ್ನು ಸಂಬಂಧಪಟ್ಟ ಪೊಲೀಸ್ ಅಧಿಕಾರಿ ಪ್ರಕರಣದಲ್ಲಿ ತದನಂತರದಲ್ಲಿ ಹಾಜರುಪಡಿಸಲು ನ್ಯಾಯಾಲಯದ ಪೂರ್ವಾನುಮತಿ ಅವಶ್ಯಕತೆ ಇರುವುದಿಲ್ಲ ಎಂಬುವುದು ಸ್ಪಷ್ಟವಾಗಿ ಕಂಡುಬರುತ್ತದೆ.

10. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅರ್ಜಿಯನ್ನು ಅವಲೋಕಿಸಿದಾಗ ಸದರಿ ಪ್ರಕರಣದಲ್ಲಿ ಆರೋಪಿ ಮೇಲೆ ಚಾರ್ಜ ಹೊರಿಸುವ ಮುನ್ನ ಎರಡು ಕಡೆ ವಾದವನ್ನು ಕೇಳಿದ್ದು, ತದನಂತರದಲ್ಲಿ ಆರೋಪಿ ಮೇಲೆ ದೋಷಾರೋಪಣೆಯನ್ನು ರಚಿಸಿ, ಓದಿ ಹೇಳಿ ಅಭಿಯೋಜನೆಯ ಪರ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯುವ ಸಲುವಾಗಿ ಪ್ರಕರಣವನ್ನು ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಲಾಗಿದೆ. ಒಂದು ವೇಳೆ ಸದರಿ ಪ್ರಕರಣದಲ್ಲಿ ಆಗಿನ ದ್ವಾರಕಾ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ಶಾಖಾ ವ್ಯವಸ್ಥಾಪಕರು ಹಾಗೂ ಕಾರವಾರದ ಉಪನೋಂದಣಾಧಿಕಾರಿಗಳು ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದು ತನಿಖಾಧಿಕಾರಿ ಸಂಗ್ರಹಿಸಿದ ಅಂತಿಮ ದೋಷಾರೋಪಣಾ ಪಟ್ಟಿ ವರದಿಯಿಂದ ಕಂಡುಬಂದಿದ್ದರೆ ದೋಷಾರೋಪಣಾ ಪಟ್ಟಿ ರಚಿಸುವ ಪೂರ್ವದಲ್ಲಿಯೇ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು

ತಮ್ಮ ವಾದದಲ್ಲಿ ತಿಳಿಸಲು ಅವಕಾಶವಿದ್ದರೂ ಆ ಕುರಿತು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

11. ದಂಡ ಪ್ರಕ್ರಿಯಾ ಸಂಹಿತೆ ಕಲಂ. 173(8) ರಡಿಯಲ್ಲಿ ಪೋಲೀಸ್ ಅಧಿಕಾರಿಗೆ ಮುಂದುವರೆದ ತನಿಖೆ ಮಾಡಲು ನ್ಯಾಯಾಲಯದ ಪೂರ್ವಾನುಮತಿಯ ಅವಶ್ಯಕತೆ ಇಲ್ಲದೇ ಇರುವುದರಿಂದ ಆ ಕುರಿತು ಪ್ರಸ್ತುತ ಅರ್ಜಿ ಮೂಲಕ ಪೂರ್ವಾನುಮತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಕಾರಣ ಅಂಶ ನಂ. 1 ಕ್ಕೆ "**ನಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

12. **<u>ಅಂಶ ನಂ.2ಃ</u>** ಮೇಲೆ ಚರ್ಚಿಸಿದ್ದರ ಅನುಗುಣವಾಗಿ ಈ ಕೆಳಗಿನಂತೆ....

**<u>ಆದೇಶ</u>**

ದಿಃ 2-11-2020 ರಂದು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲಾಗಿದೆ .

ಚಾಸಾ -1 ರಿಂದ 4 ರವರ ಸಾಕ್ಷಿ ಕುರಿತು ಸಮನ್ಸ ನೀಡಲು ಕಚೇರಿಗೆ ಈ ಮೂಲಕ ಆದೇಶಿಸಲಾಗಿದೆ.

ಪ್ರಕರಣವನ್ನು ದಿಃ 07-11-2023 ರಂದು ಕರೆಯಿರಿ.

**Sd/-**

**ಪ್ರ.ದ.ನ್ಯಾದಂ,ಅಂಕೋಲಾ.**